ಅ) ಅಲೆಮಾರಿ ಜನಾಂಗದವರಿಗಾಗಿ ಅಭಿವೃದ್ಧಿ ಕಾರ್ಯಕ್ರಮ ಈಗ ಜಾರಿಯಲ್ಲಿಲ್ಲ. ಆದರೂ ಸಹ ಸದರಿ ಜನಾಂಗ ಎಲ್ಲಿಯವರೆಗೆ ಪರಿಶಿಷ್ಟ ಜಾತಿ ಪಂಗಡಗಳ ವಿಶಾಲ ದುರ್ಬಲ ವರ್ಗದವರನ್ನು ಮೇಲೆತ್ತಲು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳಿವೆ.

ಆ) ಈಗ ಹಾಲಿ 9 ಜಿಲ್ಲೆಗಳಲ್ಲಿ ಸದರಿ ಜನಾಂಗದವರನ್ನು ಗುರುತಿಸಲಾಗಿದೆ., ಗ್ರಾಮ, ತಾಲ್ಲೂಕು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. ಸಣ್ಣ ಮತ್ತು ಅತಿಸಣ್ಣ ಹಾಗೂ ಕೃಷಿ ಕಾರ್ಮಿಕರ ಕುಟುಂಬಗಳ ಸಂಖ್ಯೆ ಸಂಗ್ರಹಿಸಬೇಕು.

ಇ) ಇನ್ನು ಘೋಷಿಸಿಲ್ಲ. ವಿಶೇಷ ಸಮಗ್ರ ಯೋಜನೆಯನ್ನು 9 ಜಿಲ್ಲೆಗಳಿಗೆ ಅನ್ವಯಿಸುವಂತೆ ತಯಾರಿಸಿರುವ ಯೋಜನೆಯು ಸರ್ಕಾರದ ಗಮನದಲ್ಲಿದೆ.

ಈ) ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ ನಂತರ ಗುರುತಿಸಿ ಅವರಿಗೆ ಸೌಲಭ್ಯ ಒದಗಿಸಲಾಗುವುದು.

ಪೆರ್ಡೂರು ಮಂಡಲದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ.

2035 - ಶ್ರೀ ಬಿ. ಬಸವರಾಜ (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಉಡುಪಿ ತಾಲ್ಲೂಕು ಪೆರ್ಡೂರು ಮಂಡಲದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಮಂಡಲದ 22,000 ಜನಸಂಖ್ಯೆಗೆ ಮೂಲಭೂತ ಅವಶ್ಯಕತೆಯಾದ ವೈದ್ಯಕೀಯ ಸೌಲಭ್ಯ ಇಲ್ಲದೆ ತೊಂದರೆ ಅನುಭವಿಸುತ್ತಿರುವುದು ಆರೋಗ್ಯ ಇಲಾಖೆಯ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಎಂದಿನಿಂದ ಇವರಿಗೆ ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅನುಕೂಲತೆ ಕಲ್ಪಿಸಿಕೊಡಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಹೌದು. ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನಿಂದ ಪ್ರಸ್ತಾವನೆ ಬಂದಕೂಡಲೇ ಪರಿಶೀಲಿಸಲಾಗುವುದು.

ಉಡುಪಿ ತಾಲ್ಲೂಕು ಪ್ರಾಥಮಿಕ ಘಟಕಗಳ ಕುರಿತು

2034 - ಶ್ರೀ ಬಿ. ಬಸವರಾಜ (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991 ಮಾರ್ಚ್‌ನಲ್ಲಿರುವಂತೆ ಉಡುಪಿ ತಾಲ್ಲೂಕಿನಲ್ಲಿ ಇದ್ದ ಪ್ರಾಥಮಿಕ ಆರೋಗ್ಯ ಘಟಕಗಳು ಎಷ್ಟು ಮತ್ತು ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದೆ (ವಿವರಗಳನ್ನೊದಗಿಸುವುದು)?

ಆ) ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರ ಆರೋಗ್ಯ ಘಟಕಗಳಲ್ಲಿ ಇರಲೇಬೇಕಾದ ಸಿಬ್ಬಂದಿ ಸಲಕರಣೆಗಳ ವಿವರಗಳನ್ನೊದಗಿಸುವುದು (ವಿವರವಾದ ಮಾಹಿತಿ ನೀಡುವುದು)?

ಇ) ಪ್ರಸ್ತುತ ಉಡುಪಿ ತಾಲ್ಲೂಕಿನಲ್ಲಿರುವ ಈ ರೀತಿಯ ಆರೋಗ್ಯ ಕೇಂದ್ರ ಘಟಕಗಳಲ್ಲಿ ಸಿಬ್ಬಂದಿ ಸಲಕರಣೆಗಳು ಎಲ್ಲೆಲ್ಲಿ ಕೊರತೆ ಇರುತ್ತದೆ. ಕೊರತೆ ಇರುವಲ್ಲಿ ಆವರ್ತನ ಅನಾವರ್ತನ ಅವಶ್ಯಕತೆಗಳನ್ನು ಭರಿಸುವಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ.?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) 1991 ಮಾರ್ಚ್ ತಿಂಗಳವರೆಗೆ ಉಡುಪಿ ತಾಲ್ಲೂಕಿನಲ್ಲಿ ಇದ್ದ 17 ಪ್ರಾಥಮಿಕ ಆರೋಗ್ಯ ಘಟಕಗಳ ಪೈಕಿ 16 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದೆ. (ವಿವರಗಳ ಪಟ್ಟಿ 1)

ಆ) ಪಟ್ಟಿ ಲಗತ್ತಿಸಲಾಗಿದೆ - 2

ಇ) ಪರಿಶೀಲನೆಯಲ್ಲಿದೆ.

ಅನುಬಂಧ-1

	1988-89		1989-90
1)	ಪೇತ್ರಿ	1)	ಸಾಲಿಗ್ರಾಮ
2)	ಪೆರಣಂಕಿಲ	2)	ಮುದರಂಗಂಡಿ
3)	ತಿರ್ವಾ	3)	ಮಲ್ಪೆ
4)	ಬಾರ್ಕೂರು	4)	ಕುಕ್ಕನಹಳ್ಳಿ
5)	ಕಾಪು	5)	ಸಾಸ್ತಾನ
6)	ಕೊಕ್ಕರ್ಣೆ	6)	ಸೇಬಾರಕಟ್ಟೆ
7)	ಕೊಳಲಗಿರಿ	7)	ಕೆಮ್ಮಣ್ಣು
8)	ಮಣಿಪುರ	8)	ಹಿರೇಬೆಟ್ಟು

ಅನುಬಂಧ-2

ಪ್ರಾಥಮಿಕ ಆರೋಗ್ಯ ಘಟಕಕೇಂದ್ರಗಳಲ್ಲಿ ನಾರ್ಮ್ಸ್ ಪ್ರಕಾರ ಇರಬೇಕಾದ ಸಿಬ್ಬಂದಿ ಪಟ್ಟಿ

ಕ್ರ. ಸಂ.	ಸಿಬ್ಬಂದಿ ವಿವರ	ಪ್ರಾಥಮಿಕ ಆರೋಗ್ಯ ಘಟಕ	ಪ್ರಾಥಮಿಕ ಆರೋಗ್ಯ ಕೇಂದ್ರ
1.	ವೈದ್ಯಾಧಿಕಾರಿಗಳು	1	1
2.	ಫಾರ್ಮಾಸಿಸ್ಟ್	1	1
3.	ಕಿರಿಯ ಆರೋಗ್ಯ ಸಹಾಯಕ	-	1
4.	ಹಿರಿಯ ಆರೋಗ್ಯ ಸಹಾಯಕ	-	1
5.	ಹಿರಿಯ ಮಹಿಳಾ ಆರೋಗ್ಯ ಸಹಾಯಕಿ	-	1
6.	ಕ್ಷೇತ್ರ ಆರೋಗ್ಯ ಶಿಕ್ಷಕರು	-	1
7.	ಸ್ಟಾಫ್ ನರ್ಸ್	-	1
8.	ಪ್ರಥಮ ದರ್ಜೆ ಸಹಾಯಕ	-	1
9.	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	1	-

10. ಚಾಲಕರು	1	1
11. ಡಿ.ಗ್ರೂಪ್ ನೌಕರರು	2	3
12. ಕಿರಿಯ ಪ್ರಯೋಗ ಶಾಲಾ ತಜ್ಞ	-	1
ಆವರ್ತ ವೆಚ್ಚ		
ಔಷಧ	15,000	30,000
ಕಛೇರಿ ವೆಚ್ಚ	3,000	5,000
ಇಂಧನ ತೈಲ	-	8,000
ಅನವರ್ತ ವೆಚ್ಚ		
ಸಲಕರಣ ಮತ್ತು ಸಾಮಗ್ರಿ	5,000	10,000
ವಾಹನ	-	25,000

ಮೂಡಿಗೆರೆ ತಾಲ್ಲೂಕಿಗೆ ವೈದ್ಯರ ಪೂರೈಕೆ

2586 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನ ಗುತ್ತಿ, ನಂದೀಪುರ ಹಂತೂರು, ಈ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಕಳೆದ ಒಂದು ವರ್ಷದಿಂದ ಇಲ್ಲದಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದುವರೆವಿಗೂ ವೈದ್ಯರು ಬಾರದಿರಲು ಕಾರಣವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡಜ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ಮೇಲಿನ ಸ್ಥಳಗಳಿಗೆ ಮೂರು ಮಂದಿ ವೈದ್ಯರುಗಳನ್ನು ದಿನಾಂಕ: 29-6-91ರಂದು ನೇಮಕಾತಿ ಮಾಡಲಾಗಿದ್ದು ಅವರುಗಳು ಕರ್ತವ್ಯದ ಮೇಲೆ ಇನ್ನೂ ಹಾಜರಾಗಬೇಕಾಗಿದೆ.

ಅಲೆಮಾರಿ ಜನಾಂಗದ ಅಭಿವೃದ್ಧಿಯ ಬಗ್ಗೆ

1839 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಕ್ಕೆ ಅಲೆಮಾರಿ ಜನಾಂಗದವರನ್ನು ಗುರುತಿಸಿ ಅವರಿಗಾಗಿ ವಿಶೇಷ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ಸಮಾಜ ಕಲ್ಯಾಣ ಸಚಿವಾಲಯದಿಂದ ಸೂಚನೆಗಳೇನಾದರೂ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯದಲ್ಲಿರುವ ಈ ಜನಾಂಗದ ಸಂಖ್ಯೆಯೆಷ್ಟು (ಜಾತಿವಾರು, ಗ್ರಾಮವಾರು ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಜನಾಂಗಗಳ ಸಂಖ್ಯೆಯ ವಿವರಗಳನ್ನು ಒದಗಿಸುವುದು)?

ಇ) ಈ ಜನಾಂಗದವರು ವಾಸಿಸುವ ಗ್ರಾಮಗಳನ್ನು ಗುರುತಿಸಲಾಗಿದೆಯೇ, ಇಲ್ಲದಿದ್ದಲ್ಲಿ ಇವರನ್ನು ಗುರುತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು?